# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 706/2020

**ಚಾಸಾ-1 ಪ್ರಾಸಾ-1**

| | | |
|---|---|---|
| ಹೆಸರು | - | ಉಮೇಶ್ |
| ತಂದೆಯ ಹೆಸರು | - | ಭೋಜಪ್ಪ |
| ವಯಸ್ಸು | - | 48 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸಸ್ಥಳ | - | ಮಳವಳ್ಳಿ ಮತ್ತಿಕೊಪ್ಪ |

(ದಿನಾಂಕಃ **04.06.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ದಿನಾಂಕಃ 27.05.2020 ರಂದು ಸಂಜೆ 5 ರ ಸಮಯದಲ್ಲಿ ಪಿಕ್‌ಅಪ್ ನಲ್ಲಿ ಕಟ್ಟಿಗೆ ತುಂಬಿಕೊಂಡು ಬರಲು ನಾನು, ಚಾಸ4 ಮತ್ತು ಚಾಸ5 ರವರು ಹೋಗಿ ಕಟ್ಟಿಗೆಯನ್ನು ತುಂಬಿಕೊಂಡು ಬರುವಾಗ 6.30 ರ ಸಮಯದಲ್ಲಿ ನಮ್ಮ ಮನೆಗೆ ಹೋಗುವ ರಸ್ತೆಗೆ ಕಟ್ಟಿಗೆ ತುಂಬಿಕೊಂಡು ಬರುತ್ತಿರುವ ಪಿಕ್‌ಅಪ್ ಗೆ ಆರೋಪಿ 1 ರವರು ಅಡ್ಡಗಟ್ಟಿ ಬೋಳಿಮಕ್ಕಳೇ ಸೂಳೇಮಕ್ಕಳೇ ಈ ರಸ್ತೆಯಲ್ಲಿ ಓಡಾಡಬೇಡಿ ಎಂದು ಹೇಳಿದ್ದರೂ ಓಡಾಡುತ್ತಿದ್ದೀರಾ ಎಂದು ಬೈಯುತ್ತಿದ್ದಾಗ ನಾನು ಪಿಕ್‌ಅಪ್ ನಿಂದ ಕೆಳಗೆ ಇಳಿಯುವಾಗ ಆರೋಪಿ 1 ರವರು ಕತ್ತಿಯಿಂದ ನನಗೆ ಹಲ್ಲೆ ಮಾಡಲು ಬಂದಾಗ ನಾನು ಹಿಂತಿರುಗಿದಾಗ ನನ್ನ ಕುತ್ತಿಗೆಯ ಬಲಭಾಗ ಮತ್ತು ಬೆನ್ನಿಗೆ ಪೆಟ್ಟಾಗಿರುತ್ತದೆ.

2. ಆರೋಪಿ 2 ರಿಂದ 5 ರವರು ಬೋಳಿಮಕ್ಕಳಾ ಸೂಳೇಮಕ್ಕಳಾ ಎಂದು ಅವಾಚ್ಯವಾಗಿ ಬೈಯುತ್ತಾ ಆರೋಪಿ 2 ಮತ್ತು 3 ರವರು ದೊಣ್ಣೆಯಿಂದ ನನಗೆ ಕೈ ಮೇಲೆ ಮತ್ತು ಬೆನ್ನಿನ ಮೇಲೆ ಹಲ್ಲೆ ಮಾಡಿರುತ್ತಾರೆ.

3. ನಮ್ಮ ಪಿಕ್‌ಅಪ್ ನಲ್ಲಿ ಇದ್ದ ಚಾಸ4 ಮತ್ತು ಚಾಸ5 ರವರು ಜಗಳವನ್ನು ಬಿಡಿಸಿರುತ್ತಾರೆ. ಆರೋಪಿ 1 ರಿಂದ 3 ರವರು ನಮಗೆ ಇನ್ನೊಮ್ಮೆ ಸದರಿ ರಸ್ತೆಯಲ್ಲಿ ಓಡಾಡಿದರೆ ಬೆಂಕಿ ಹಚ್ಚಿ ಸುಟ್ಟಾಕ್ಕಿರುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ.

4. ಸದರಿ ಗಲಾಟೆಯು ನಮ್ಮ ಮತ್ತು ಆರೋಪಿಗಳ ಮಧ್ಯ ಸರ್ವೆ ನಂ 83/4 ರ ಮಸಗಲ್ಲಿ ಗ್ರಾಮದಲ್ಲಿ ಜಮೀನಿನಲ್ಲಿ ಜಗಳ ಆಗಿರುತ್ತದೆ. ನಂತರ ನನ್ನನ್ನು ಚಾಸ4 ಮತ್ತು ಚಾಸ5 ರವರು ಹೊಸನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ.

5. ನಾನು ಸದರಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ನನಗೆ ದೂರನ್ನು ಬರೆಯಲು ಆಗದೇ ಇರುವುದರಿಂದ ನಾನು ಚಾಸ3 ರವರಿಂದ ನನ್ನ ದೂರನ್ನು ಬರೆಯಿಸಿ ನಾನು ಓದಿ ಸಹಿ ಮಾಡಿ ಪೊಲಿಸರಿಗೆ ನೀಡಿರುತ್ತೇನೆ.

6. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಲಿಖಿತ ದೂರು ಆಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ1 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

7. ದಿನಾಂಕಃ 29.05.2020 ರಂದು ಮಸಗಲ್ಲಿ ಗ್ರಾಮದ ಮಳವಳ್ಳಿ ಮತ್ತಿಕೊಪ್ಪ ಮಜರೇ ಸರ್ವೆ ನಂ 83/4 ರಲ್ಲಿರುವ ಆರೋಪಿ 5 ರವರ ಹೆಸರಿನಲ್ಲಿರುವ ಜಮೀನಿಗೆ ಪೋಲಿಸರು 12.30 ಗಂಟೆಗೆ ಬಂದು ಗಲಾಟೆ ಆದ ಜಾಗವನ್ನು ನಾನೇ ತೋರಿಸಿರುತ್ತೇನೆ. ಅಲ್ಲಿ ಮಹಜರ್ ಗೆ ಪೊಲಿಸರು ಚಾಸ2 ಮತ್ತು ಚಾಸ3 ರವರನ್ನು ಕರೆದಿರುತ್ತಾರೆ.

8. ಸದರಿ ಚಾಸ2 ಮತ್ತು ಚಾಸ3 ರವರ ಸಮಕ್ಷಮ ನಕ್ಷೆಯನ್ನು ಬಿಡಿಸಿ ಪೇಪರ್ ನಲ್ಲಿ ಪ್ರಿಂಟ್ ತೆಗೆದು ನಮ್ಮ ಸಹಿಯನ್ನು ಪಡೆದಿರುತ್ತಾರೆ. ಸದರಿ ಸ್ಥಳದಲ್ಲಿ ಆರೋಪಿಗಳು ಹಲ್ಲೆಗೆ ಬಳಸಿ ಬಿಸಾಕಿದ್ದ ಎರಡು ದೊಣ್ಣೆ ಮತ್ತು ಒಂದು ಕತ್ತಿಯನ್ನು ಪೊಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ.

9. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಕೃತ್ಯ ನಡೆದ ಸ್ಥಳದ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಯಾಗಿದ್ದು, ಅದನ್ನು ಸಾಕ್ಷಿ ನೋಡಿ

ಗುರುತಿಸಿದ್ದು, ಸದರಿಯನ್ನು ನಿಪಿ2 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

10. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಕೃತ್ಯ ನಡೆದ ಸ್ಥಳದ ಕಚ್ಚಾನಕ್ಷೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ3 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ಎರಡು ಭಾಗ ಚಿತ್ರಗಳನ್ನು ತೋರಿಸಿದ್ದು ಅದರಲ್ಲಿರುವ ತನ್ನ ಇರುವಿಕೆಯನ್ನು ಮತ್ತು ಸದರಿ ಪೊಟೋಗಳನ್ನು ಘಟನಾ ಸ್ಥಳದಲ್ಲಿ ತೆಗೆದಿರುತ್ತಾರೆ ಎಂದು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ನಿಪಿ4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎರಡು ದೊಣ್ಣೆಗಳನ್ನು ಕ್ರಮವಾಗಿ ಎಂ.ಒ 1 ಮತ್ತು ಎಂ.ಒ 2 ಮತ್ತು ಕತ್ತಿಯನ್ನು ಎಂ.ಒ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದಃ</u>**

1. ನಮ್ಮ ಮತ್ತು ಆರೋಪಿಗಳ ಮಧ್ಯ ಸರ್ವೆ ನಂ 83/4 ಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯ ಇರುತ್ತದೆ ಎಂದು ಸೂಚಿಸಿದರೆ ಸರಿ. ಚಾಸ2 ರಿಂದ ಚಾಸ4 ರವರು ನನ್ನ ಸಂಬಂಧಿಸಿಕರು ಎಂದು ಸೂಚಿಸಿದರೆ ಸರಿ.

2. ಚಾಸ2 ರವರ ಮನೆಯು ನಮ್ಮ ಮನೆಯಿಂದ ಸುಮಾರು 200 ಮೀಟರ್ ಅಂತರ ಇರುತ್ತದೆ. ಚಾಸ3 ರವರ ಮನೆಯಿಂದ ಚಾಸ4 ರವರ ಮನೆಗೆ 500 ಮೀಟರ್ ಅಂತರ ಇರುತ್ತದೆ ಮತ್ತು ಚಾಸ3 ರವರ ಮನೆಗೂ ಮತ್ತು ನಮ್ಮ ಮನೆಯ ಮಧ್ಯ 500 ಮೀಟರ್ ಅಂತರ ಇರುತ್ತದೆ.

3. ಆರೋಪಿ 5 ರವರು ಸರ್ವೆ ನಂ 83/4 ಕ್ಕೆ ಸಂಬಂಧಪಟ್ಟಂತೆ ಇದೇ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಶಾಶ್ವತ ನಿರ್ಬಂಧ ಕಾಜ್ಞೆ ಪಡೆದುಕೊಂಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ. ನಮ್ಮ ತಾಯಿ ಆರೋಪಿ 2 ಮತ್ತು 5 ರವರ ವಿರುದ್ಧ ಒಂದು ಅಸಲು ದಾವೆಯನ್ನು ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದು ಸೂಚಿಸಿದರೆ ಸರಿ.

4. ದಿನಾಂಕಃ 27.05.2020 ರಂದು ಸಂಜೆ 6 ಗಂಟೆಗೆ ನಾನು ಮತ್ತು ಚಾಸ 2, ಚಾಸ 4, ನನ್ನ ಹೆಂಡತಿ ಮತ್ತು ತಾಯಿ ಗಿರಿಜಮ್ಮ ರವರ ಆರೋಪಿಗಳ ಮೇಲೆ ಹಲ್ಲೆ ಮಾಡಿದ್ದಕ್ಕೆ ಕ್ರಿಮಿನಲ್ ಮೊಖದಮ್ಮೆ ಸಂಖ್ಯೆ 45/2020 ರಂತೆ ದೂರನ್ನು ದಾಖಲಿಸಿರುತ್ತಾರೆ ಎಂದು ಸೂಚಿಸಿದರೆ ಸರಿ.

5. ನಾನು ಆ ದಿನ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಸೂಚಿಸಿದರೆ ಸರಿ. ಆಗ ಮಾನ್ಯ ಸಹಾಯಕ ಅಭಿಯೋಜಕರು ಸಾಕ್ಷಿಗೆ ಸರಿಯಾಗಿ ಉತ್ತರ ಕೋಡಿ ಎಂದು ಪ್ರಶ್ನಿಸಿದಾಗ ನನಗೆ ಮಾತನಾಡಲು ಬರುತ್ತಿತ್ತು ಎಂದು ಉತ್ತರ ನೀಡಿರುತ್ತಾರೆ.

6. ನಾನು ಚಾಸ 3 ರವರನ್ನು ಫೋನ್ ಮೂಲಕ ಕರೆ ಮಾಡಿ ನನ್ನನ್ನು ಸಂಪರ್ಕಿಸುವಂತೆ ಕೇಳಿಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಗಲಾಟೆಯು ಸಂತೋಷ್ ರವರಿಗೆ ಯಾವ ಸಮಯದಲ್ಲಿ ಗೊತ್ತಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಗಲಾಟೆ ಮುಗಿದು ನಾನು ಆಸ್ಪತ್ರೆಯಲ್ಲಿ ಇದ್ದಾಗ ಅವರಿಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

7. ನಾನು ಪೊಲಿಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸದೇ ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದು ಸೂಚಿಸಿದರೆ ಸರಿ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಒಂದು ದಿನ ಇದ್ದೆ. ನ್ಯಾಯಾಲಯದ ಮುಂದೆ ಇರುವ ಎಂ.ಒ 1 ರಿಂದ 3 ಗಳನ್ನು ಪೊಲಿಸರಿಗೆ ನಾನೇ ಕೊಟ್ಟಿರುತ್ತೇನೆ ಎಂದರೆ ಸರಿ.

8. ಮಹಜರ್ ಗೆ ಸಹಿ ಹಾಕಿದ ಸಾಕ್ಷಿದಾರರು ಮತ್ತು ನಾನು ವಿಶ್ವಾಸಿಗರಾಗಿರುತ್ತೇವೆ ಎಂದರೆ ಸರಿ. ಮಹಜರ್ ಗೆ ಸಹಿ ಮಾಡಿದ ಪಂಚರನ್ನು ನಾನು ಕರೆದುಕೊಂಡು ಬಂದಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಎಂ.ಒ 1 ರಿಂದ 3 ಕ್ಕೆ ಚೀಟಿ ಅಂಟಿಸಿ ಪಂಚರ ಸಹಿ ಪಡೆದುಕೊಂಡಿರುವುದಿಲ್ಲ ಎಂದು ಸೂಚಿಸಿದರೆ ಸರಿ.

9. ನ್ಯಾಯಾಲಯದ ಮುಂದೆ ಇರುವ ಎಂ.ಒ ಗಳನ್ನು ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ಅಮಾನತ್ತು ಪಡಿಸಿಕೊಳ್ಳದೇ ನಾವು ಆರೋಪಿಗಳ ಮೇಲೆ ವೈಮನಸ್ಸು ಇರುವುದರಿಂದ ಆರೋಪಿಗಳ ಮೇಲೆ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಆರೋಪಿಗಳ ಮೇಲೆ ಹಲ್ಲೆ ಮಾಡಿ ಈ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.